**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಖಾನಾಪೂರ.**

**ಸಿ.ಸಿ ನಂ: 1378/2018**

ಪಿ.ಡಬ್ಲ್ಯೂ - 3

ಸಿ.ಡಬ್ಲ್ಯೂ - 4

ಹೆಸರು : ಸಂತೋಷ ಗಣಪತಿ ತಳವಾರ

ವಯಸ್ಸು : 39 ವರ್ಷ

ಉದ್ಯೋಗ : ಗೌಂಡಿ ಕೆಲಸ,

ವಾಸ : ಹಲಕರ್ಣಿ , ತಾಃ ಖಾನಾಪೂರ

ದಿನಾಂಕ 16-09-2025 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

ಚಾಸಾ 05 ನನಗೆ ಪರಿಚಯ ಇರುವುದಿಲ್ಲ.

ಸಾಕ್ಷಿದಾರರಿಗೆ ಈಗ ಜಪ್ತ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಸದರಿ ಮಹಜರನ್ನು ನಿ.ಪಿ.6 ಎಂದು ಗುರುತಿಸಲಾಯಿತು. ಈಗ 7-8 ವರ್ಷಗಳ ಹಿಂದೆ ಜಾಬೂಂಟಿ ಕ್ರಾಸನಲ್ಲಿ ನಿಂತಾಗ ಪೊಲೀಸರು ಸಹಿ ಮಾಡಿಸಿಕೊಂಡರು. ಪೊಲೀಸರು ಏನು ಮಾಡಿದರು ನನಗೆ ಗೊತ್ತಿಲ್ಲ, ಆದರೆ ಸಹಿ ಮಾತ್ರ ಮಾಡಿಸಿಕೊಂಡರು. ನಮ್ಮ ಸಮಕ್ಷಮ ಯಾವುದೇ ಮುದ್ದೆ ಮಾಲುಗಳನ್ನು ಅಮಾನತ್ ಪಡಿಸಿಕೊಂಡಿರುವುದಿಲ್ಲ. ಸಾಕ್ಷಿದಾರರು ಈಗ ಎರಡು ಫೊಟೋಗಳನ್ನು ನೋಡಿ ಗುರುತಿಸಿದ್ದು ಇರುತ್ತದೆ. ಸದರಿ ಫೊಟೋಗಳನ್ನು ನಿಪಿ7 ಮತ್ತು 8 ಎಂದು ಗುರುತಿಸಲಾಯಿತು. ನಿಪಿ-7 ರಲ್ಲಿ ಬಲದಿಂದ ಎರಡನೆಯದವನು ನಾನೇ ಎಂದು ನುಡಿದಿರುತ್ತಾರೆ. ಪೊಲೀಸರು ಫೊಟೋಕ್ಕೆ ನಿಲ್ಲು ಎಂದಾಗ ನಿಂತೇನು. ಏಕೆ ಫೊಟೋ ತೆಗೆದರೆಂದು ನನಗೆ ಗೊತ್ತಿಲ್ಲ. ಸಾಕ್ಷಿದಾರರು ಆರೋಪಿತರನ್ನು ವಿಸಿಯಲ್ಲಿ ನೋಡಿ ಆ ದಿನ

ನಿಪಿ-7 ಮತ್ತು 8 ಫೋಟೋ ತೆಗೆಯ ಬೇಕಾದರೆ ಆರೋಪಿತರು ಕೂಡ ಪೊಲೀಸರ ಜೊತೆ ಇದ್ದರು.

(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲುಃ ಸಸಅ ರವರಿಂದ

ದಿಃ 23.12.2017 ರಂದು ಚಾಸಾ 19 ರವರು ಪಂಚನಾಮೆಗೆ ನನ್ನನ್ನು ಕರೆದರು ಎಂದು ಸೂಚಿಸಿದರೆ, ಪಂಚನಾಮೆ ಬಗ್ಗೆ ನನಗೆ ಮಾಹಿತಿ ನೀಡಿಲ್ಲ ಎನ್ನುತ್ತಾರೆ. ನನ್ನ ಹಾಗೂ ಚಾಸಾ 5 ರವರ ಸಮಕ್ಷಮ ಆರೋಪಿತರಿಂದ ಹೊಂಡಾ ಕಂಪನಿಯ ಆ್ಯಕ್ಟೀವಾ ಮೋಟರ ಸೈಕಲ ನಂ.ಕೆಎ-28/ಯು-9653 ನ್ನು ಹಾಗೂ ಕಬ್ಬಿಣ ರಾಡಗಳನ್ನು, ಕೆಂಪು ಬಣ್ಣದ ಪಕ್ಕಡನ್ನು, ಹಸಿರು ಬಣ್ಣದ ಸ್ಕ್ರೂ ಡ್ರೈವರನ್ನು ಜಪ್ತು ಪಡಿಸಿಕೊಂಡಿದ್ದರು ಎಂದು ಸೂಚಿಸಿದರೆ ಸರಿಯಲ್ಲ . ಸಂಜೆ 04.50 ರಿಂದ 05.55 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ . ನನ್ನ ಸಮಕ್ಷಮ ಜಪ್ತ ಪಡಿಸಿ ಫೋಟೋ ತೆಗೆದುಕೊಂಡಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.